**KARNATAKA NURSING & PARA MEDICAL REGULATING AUTHORITY**
**(ACT-2012)**
# Para Medical Board, Bengaluru
**Address:** #5, New No: 40/20A, Lakshmi Complex, First Floor, Opp. Vani Vilas Hospital, Fort, Bengaluru-560002
**Contact No**: 080-26702159, 26705773, 26703922 Fax: 26705410 **Email** : pmboffice97@gmail.com

**PMB/ 106 /17-18** **Date: 24.01.2018**

## ವಿಶೇಷ ಪ್ರಕಟಣೆ

2005-06 ರಿಂದ 2011-12 ಸಾಲಿನಲ್ಲಿ ಪ್ಯಾರಾ ಮೆಡಿಕಲ್ ಕೋರ್ಸ್‌ಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳು ಮಂಡಳಿಯ ನಿಯಮಾನುಸಾರ ಪ್ರವೇಶಾತಿ ಪಡೆದ 6 ಶೈಕ್ಷಣಿಕ ವರ್ಷಗಳ ಒಳಗಾಗಿ ಕೋರ್ಸ್‌ನ್ನು ಪೂರ್ಣಗೊಳಿಸಿ ತೇರ್ಗಡೆ ಹೊಂದಬೇಕಾಗಿರುತ್ತದೆ. ಆದರೆ ಸದರಿ ಸಾಲಿನಲ್ಲಿ ಪ್ರವೇಶ ಪಡೆದು ಕೋರ್ಸ್‌ನ ಅವಧಿ ಮುಗಿಸಿ ಅನುತೀರ್ಣರಾಗಿರುವ ವಿದ್ಯಾರ್ಥಿಗಳು ಮತ್ತೆ ಪರೀಕ್ಷೆ ಬರೆಯಲು ಅನುಮತಿ ಕೋರಿರುತ್ತಾರೆ. ಈ ರೀತಿ ನಿಗಧಿತ ಅವಧಿಯೊಳಗೆ ತೇರ್ಗಡೆ ಹೊಂದದೆ ಇರುವ ವಿದ್ಯಾರ್ಥಿಗಳ ಹಿತದೃಷ್ಠಿಯಿಂದ ಅಂತಿಮ ಪರೀಕ್ಷೆ ಬರೆಯಲು ಅನುಮತಿ ನೀಡುವ ಬಗ್ಗೆ ದಿನಾಂಕ: 10.01.2018 ರಂದು ನಡೆದ ನರ್ಸಿಂಗ್ ಹಾಗೂ ಅರೆ ವೈದ್ಯಕೀಯ ಪ್ರಾಧಿಕಾರದ ಸಭೆಗೆ ಒಪ್ಪಿಗೆ ಕೋರಿ ಮಂಡಿಸಲಾಗಿತ್ತು. ಆದರೆ ಸಭೆಯಲ್ಲಿ ಸದರಿ ಮನವಿಯು ಪರಿಗಣಿಸಿರುವುದಿಲ್ಲವಾದ್ದರಿಂದ, ಮತ್ತೊಮ್ಮೆ ವಿದ್ಯಾರ್ಥಿಗಳ ಹಿತದೃಷ್ಠಿಯಿಂದ 2018ರ ಫೆಬ್ರವರಿ ತಿಂಗಳಿನಲ್ಲಿ ನಡೆಯುವ ಪೂರಕ ಪರೀಕ್ಷೆಯಲ್ಲಿ ಅಂತಿಮ ಪರೀಕ್ಷೆ ಬರೆಯಲು ಅನುಮತಿ ನೀಡುವಂತೆ ಸರ್ಕಾರಕ್ಕೆ ಕೋರಲಾಗಿದೆ. ಅದುದರಿಂದ 2005-06 ರಿಂದ 2011-12ನೇ ಸಾಲಿನ ವಿದ್ಯಾರ್ಥಿಗಳು ತಮ್ಮ ಸ್ವಂತ ಜವಾಬ್ದಾರಿ ಮೇರೆಗೆ ಪರೀಕ್ಷೆಗೆ ಅರ್ಜಿಸಲ್ಲಿಸಬಹುದು ಮತ್ತು ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕವನ್ನು 25.01.2018ರವರೆಗೆ ವಿಸ್ತರಿಸಲಾಗಿದೆ. ಪ್ರವೇಶ ಪತ್ರವನ್ನು ವಿತರಿಸುವುದು ಸರ್ಕಾರದ ನೀರ್ಣಯದ ಮೇಲೆ ಅವಲಂಬಿಸಿರುತ್ತದೆ.

ತಮ್ಮ ನಂಬುಗೆಯ

ವಿಶೇಷ ಅಧಿಕಾರಿಗಳು